

ಚಂದ್ರನಲ್ಲಿನ ಸಂಪನ್ಮೂಲಗಳನ್ನು ಬಳಸುವ ಸಾಧ್ಯತೆ ಹಾಗೂ ಚಂದ್ರನನ್ನು ಮನುಷ್ಯನ ಹೊಸ ನೆಲೆಯನ್ನಾಗಿಸುವ ಸಂಭಾವ್ಯತೆಗಳ ಬೆನ್ನು ಬಿದ್ದಿರುವ ವಿಶ್ವದ ಅಗ್ರಮಾನ್ಯ ರಾಷ್ಟ್ರಗಳು ಬಾಹ್ಯಾಕಾಶ ಸಾಹಸದಲ್ಲಿ ತೊಡಗಿಕೊಂಡಿವೆ. ಚಂದಮಾಮನ ರೇಸ್‌ನಲ್ಲಿ ಭಾರತವೇನೂ ಹಿಂದೆ ಬಿದ್ದಿಲ್ಲ. ರಷ್ಯಾ ಮತ್ತು ಅಮೆರಿಕಗಳ ಪೈಪೋಟಿ ಎನ್ನುವಂತಾಗಿದ್ದ ಬಾಹ್ಯಾಕಾಶ ಸ್ಪರ್ಧೆಯಲ್ಲಿ ಭಾರತವೂ ತೊಡಗಿಕೊಂಡು, ಚಂದ್ರನ ಅನ್ವೇಷಣೆಯಲ್ಲಿ ಸಾಕಷ್ಟು ದೂರ ಸಾಗಿದೆ. 'ಚಂದ್ರಯಾನ-1' ಯಶಸ್ವಿಗೊಂಡರೂ, 'ಚಂದ್ರಯಾನ-2'ರ ಕಥೆ ಕೈಗೆ ಬಂದರೂ ಬಾಯಿಗೆ ಬಾರದ ತುತ್ತಿನಂತಾದುದರಿಂದ ನಿರಾಶೆ ಅನುಭವಿಸಬೇಕಾಯಿತು. ತಪ್ಪುಗಳಿಂದ ಪಾಠ ಕಲಿತು, ಹೊಸ ಉಮೇದಿನಲ್ಲಿ 'ಚಂದ್ರಯಾನ-3' ನೌಕೆಗೆ ಹಸಿರುನಿಶಾನೆ ತೋರಲು 'ಇಸ್ರೋ' ಸಜ್ಜಾಗಿದೆ. ಅಂದಹಾಗೆ, 'ಚಂದ್ರಯಾನ-3'ರ ವೈಶಿಷ್ಟ್ಯಗಳೇನು? ಚಂದ್ರನ ಅನ್ವೇಷಣೆ ಈಗ ಯಾವ ಹಂತದಲ್ಲಿದೆ? ಚಂದ್ರಯಾನದ ಚಂದಯಾನ ಈ ಬಾರಿಯ 'ಸುಧಾ' ಸಂಚಿಕೆಯ ವಿಶೇಷ.

■ ಡಾ. ಬಿ.ಆರ್. ಗುರುಪ್ರಸಾದ್

ಲೇಖಕರು ನಿವೃತ್ತ ವಿಜ್ಞಾನಿ ಹಾಗೂ ಉಪನಿರ್ದೇಶಕರು, ಇಸ್ರೋ